**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1227 |
| 2 | ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 21–08–2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ: 13.03.2025 ರಂದು ಬೆಂಗಳೂರು ನಗರದ ತ್ಯಾಜ್ಯ ವಿಲೇವಾರಿ ಕುರಿತು ಸದನದಲ್ಲಿ ಸರ್ಕಾರವು 25 ಕೆ.ಎಲ್.ಡಿ ಸಾಮರ್ಥ್ಯದ ಘಟಕ ದುರಸ್ಥಿಯಲ್ಲಿರುತ್ತದೆಂದು ಭರವಸೆ ನೀಡಿದ್ದು, ಅದರಂತೆ ಸದರಿ ಘಟಕವು ಯಾವ ಅವಧಿಯಿಂದ ದುರಸ್ಥಿಯಲ್ಲಿದೆ ಮತ್ತು ಈ ಘಟಕವನ್ನು ಸುಸ್ಥಿತಿಗೆ ತರಲು ಕೈಗೊಂಡಿರುವ ಕ್ರಮವೇನು; | • ಜನವರಿ–2024 ರಿಂದ ದುರಸ್ಥಿಗೊಂಡಿರುತ್ತದೆ.<br>• ಸದರಿ ಘಟಕವನ್ನು ಸುಸ್ಥಿತಿಗೆ ತರಲು ಕ್ರಮ ವಹಿಸಲಾಗುತ್ತಿದ್ದು, ಈ ಮಧ್ಯೆ ಸದರಿ ಭೂಭರ್ತಿ ಪ್ರದೇಶದಲ್ಲಿ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯವನ್ನು ಸಂಸ್ಕರಿಸಲು ಪ್ರತಿನಿತ್ಯ 2 ಎಮ್.ಎಲ್.ಡಿ. ಸಾಮರ್ಥ್ಯದ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಟೆಂಡರ್ ಕರೆಯಲಾಗಿದೆ. |
| ಆ) | ಭೂಭರ್ತಿ ಪ್ರದೇಶದ ಸುತ್ತಮುತ್ತಲಿನ ಕೆರೆಗಳು ಮಲಿನಗೊಳ್ಳದಂತೆ ಪಾಲಿಕೆ/ ಬಿಎಸ್‌ಡಬ್ಲ್ಯೂಎಂಎಲ್ ವತಿಯಿಂದ ಕೆರೆಗಳ ಅಭಿವೃದ್ಧಿ ಕಾರ್ಯಕ್ಕೆ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವುದು ನಿಜವೇ; ಇದ್ದಲ್ಲಿ, ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆಯೇ; ಒಪ್ಪಂದ ಕರಾರುಗಳನ್ನು ಮಾಡಿಕೊಳ್ಳಲಾಗಿದೆಯೇ; ಮಾಡಿದ್ದಲ್ಲಿ, ಎಷ್ಟು ಮೊತ್ತಕ್ಕೆ ಒಪ್ಪಂದ ಕರಾರು ಮಾಡಿಕೊಳ್ಳಲಾಗಿದೆ; | • ಹೌದು.<br>• ಗುತ್ತಿಗೆದಾರರಾದ ಮೆ॥ ಶ್ರೀನಿವಾಸ್ ಕನ್‌ಸ್ಟ್ರಕ್ಷನ್ಸ್ ರವರಿಗೆ ರೂ.49,20,00,249/–ಗಳ(ಜಿಎಸ್‌ಟಿ ಹೊರತುಪಡಿಸಿ) ಮೊತ್ತಕ್ಕೆ ಕಾರ್ಯಾದೇಶ ನೀಡಲು ಸರ್ಕಾರದಿಂದ ಅನುಮೋದನೆ ನೀಡಿದ್ದು, ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ. |
| ಇ) | ಬ್ರ್ಯಾಂಡ್ ಬೆಂಗಳೂರು – ಸ್ವಚ್ಛ ಬೆಂಗಳೂರು ಪರಿಕಲ್ಪನೆಯಡಿ ಪಾಲಿಕೆಯ ನಾಲ್ಕು ದಿಕ್ಕುಗಳಲ್ಲಿ 30 ವರ್ಷಗಳವರೆಗೆ ತ್ಯಾಜ್ಯ ನಿರ್ವಹಿಸಲು 04 ಸಮಗ್ರ ತ್ಯಾಜ್ಯ ನಿರ್ವಹಣೆ ಘಟಕಗಳನ್ನು ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದು ಭರವಸೆ ನೀಡಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ; | • ದಿನಾಂಕ: 07.11.2024 ರಂದು ಟೆಂಡರ್ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ, ಸದರಿ ಟೆಂಡರ್‌ನಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸಿರುವುದಿಲ್ಲ.<br>• ನಂತರ, ಸ್ಪರ್ಧಾತ್ಮಕ ಬಿಡ್ಡುದಾರರು ಭಾಗವಹಿಸಲು ಅನುವಾಗುವಂತೆ 4 ಪ್ಯಾಕೇಜ್‌ಗಳ ಬದಲಾಗಿ ನಗರದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಸ್ಥಾಪಿಸಲು 2 ಪ್ಯಾಕೇಜ್‌ಗಳಾಗಿ ಮರುವಿಂಗಡಿಸಿ, ಸರ್ಕಾರದ ಅನುಮೋದನೆ ನೀಡಿದ್ದು, ದಿನಾಂಕ: 11.07.2025 ರಂದು ಟೆಂಡರ್ ಅಧಿಸೂಚನೆ ಹೊರಡಿಸಲಾಗಿದ್ದು, ಬಿಡ್ ಸಲ್ಲಿಸಲು ದಿನಾಂಕ: 28.08.2025 ಅಂತಿಮ ದಿನಾಂಕವಾಗಿರುತ್ತದೆ. |
| ಈ) | ತ್ಯಾಜ್ಯ ವಿಲೇವಾರಿಗೋಸ್ಕರ ಬೆಂಗಳೂರು ಸುತ್ತಮುತ್ತ 100 ಎಕರೆ ಜಮೀನಿನಲ್ಲಿ ಒಂದು ವೈಜ್ಞಾನಿಕವಾದ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸುವುದಾಗಿ ಹೇಳಲಾಗಿದ್ದು, ಅದು ಕಾರ್ಯಗತಗೊಂಡಿದೆಯೇ? | ಸಮಗ್ರ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸುವ ಕಾರ್ಯ ಟೆಂಡರ್ ಹಂತದಲ್ಲಿರುತ್ತದೆ. |

**ನಅಇ 401 ಎಂಎನ್‌ವೈ 2025 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ